**ಆರ್.ಡಬ್ಲ್ಯೂ: 1**

**ದಿನಾಂಕಃ 28-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 5 ಮತ್ತು 6 ನೇ ಎದುರುದಾರರ ಪರವಾಗಿ ಶ್ರೀಮತಿ ಪಿ.ಕೆ.ಟಿ. ವಕೀಲರಿಂದಃ-**

10. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ಈ ಜಮೀನಿಗೆ ಸಂಬಂಧಿಸಿದ ಎಲ್ಲಾ ಕಾಗದ ಪತ್ರಗಳನ್ನು ನಾನೇ ನೋಡಿಕೊಳ್ಳುತ್ತೇನೆ, ಆದ್ದರಿಂದ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ಸರ್ವೆ ನಂ. 533/1 ಅ ರ ಜಮೀನು 1995 ರಿಂದ 2008 ರವರೆಗೆ ಪಾಂಡುರಂಗ ಗುಣಾ ನಾಯ್ಕ ರವರ ಹೆಸರಿನಲ್ಲಿರುತ್ತದೆ ಎಂದರೆ ಸಾಕ್ಷಿಯು ಮೊದಲಿಗೆ ಪಾಂಡುರಂಗ ಗುಣಾ ನಾಯ್ಕ ಮತ್ತು ಬುಧಿಯಾ ನಾಯ್ಕ ರವರ ಹೆಸರಿನಲ್ಲಿದ್ದು, ಆ ನಂತರ ನಾಲ್ಕು ಜನರ ಹೆಸರಿನಲ್ಲಿರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ 1988-1989 ರ ಪಹಣಿ ಪತ್ರಿಕೆಯನ್ನು ತೋರಿಸಿ, ಅದರಲ್ಲಿ ಪಾಂಡುರಂಗ ಗುಣಾ ನಾಯ್ಕ ರವರ ಹೆಸರು ಇರುತ್ತದೆ ಎಂದರೆ ಸರಿ. ಅದೇ ರೀತಿ 2000-2001 ರ ಪಹಣಿ ಪತ್ರಿಕೆಯನ್ನು ತೋರಿಸಿ, ಅದರಲ್ಲಿಯೂ ಸಹ ಪಾಂಡುರಂಗ ಗುಣಾ ನಾಯ್ಕ ರವರ ಹೆಸರು ಇರುತ್ತದೆ ಎಂದರೆ ಸರಿ. ಸದರಿ ಪಹಣಿ ಪತ್ರಿಕೆಗಳನ್ನು ನಿ.ಆರ್-27 ಮತ್ತು 28 ಎಂದು ಗುರುತಿಸಲಾಯಿತು.

11. ಸಾಕ್ಷಿಗೆ ಕಂದಾಯ ರಶೀದಿಯನ್ನು ತೋರಿಸಿ, ಪಾಂಡುರಂಗ ಗುಣಾ ನಾಯ್ಕ ರವರು ಮೃತರಾದ ನಂತರ, ಸರ್ವೆ ನಂ.533/1 ಅ ರ ಜಮೀನಿಗೆ ಆತನ ಮಗ ಸದಾನಂದ ಪಾಂಡುರಂಗ ನಾಯ್ಕ ರವರು ಕಂದಾಯ ಭರಿಸುತ್ತಿದ್ದರು ಎಂದರೆ ಸಾಕ್ಷಿಯು ಜಂಟಿ ಖಾತೆ ಇದ್ದುದ್ದರಿಂದ ಯಾರು ಬೇಕಾದರೂ ತುಂಬುತ್ತಿದ್ದರು ಎಂದು ನುಡಿಯುತ್ತಾರೆ. ಸದರಿ ಕಂದಾಯ ರಶೀದಿಯನ್ನು ನಿ.ಆರ್-29 ಎಂದು ಗುರುತಿಸಲಾಯಿತು. ಸಾಕ್ಷಿಗೆ ಸರ್ವೆ ನಂ.269 ಅ/6 ರ ಪಹಣಿ ಪತ್ರಿಕೆಯನ್ನು ತೋರಿಸಿ, ಕಾಲಂ ನಂ. 10 ರಲ್ಲಿ ಮ್ಯುಟೇಶನ್ ನಂ. 6944 ಎಂದು ಹಾಗೂ ಕಾಲಂ ನಂ.11 ರಲ್ಲಿ ಪಾಂಡುರಂಗ ಗುಣಾ ನಾಯ್ಕ ರವರ ಸ್ವಯಂ ಕುಳ ಹಕ್ಕು ಎಂದು ನಮೂದಾಗಿರುತ್ತದೆ ಎಂದರೆ ಸರಿ. ಸದರಿ ಪಹಣಿ ಪತ್ರಿಕೆಯನ್ನು ನಿ.ಆರ್-30 ಎಂದು ಗುರುತಿಸಲಾಯಿತು.

12. ಸಾಕ್ಷಿಗೆ ಸರ್ವೆ ನಂ. 269 ಅ/10 ರ ಪಹಣಿ ಪತ್ರಿಕೆಯನ್ನು ತೋರಿಸಿ, ಕಾಲಂ ನಂ. 10 ರಲ್ಲಿ ಮ್ಯುಟೇಶನ್ ನಂ. 6944 ಎಂದು ಹಾಗೂ ಕಾಲಂ ನಂ.11 ರಲ್ಲಿ ಪಾಂಡುರಂಗ ಗುಣಾ ನಾಯ್ಕ ರವರ ಸ್ವಯಂ ಕುಳ ಹಕ್ಕು ಎಂದು ನಮೂದಾಗಿರುತ್ತದೆ ಎಂದರೆ ಸರಿ. ಸದರಿ ಪಹಣಿ ಪತ್ರಿಕೆಯನ್ನು

ನಿ.ಆರ್–31 ಎಂದು ಗುರುತಿಸಲಾಯಿತು. ಮ್ಯುಟೇಷನ ನಂ. 6944 ನ್ನು ಸಾಕ್ಷಿಗೆ ತೋರಿಸಿ, ಅದರಲ್ಲಿ ಸರ್ವೆ ನಂ. 269 ಅ/6, 269 ಅ/10, 533/1 ಅ ಗಳನ್ನು ಹೊರತುಪಡಿಸಿ, ಉಳಿದ ಜಮೀನುಗಳು ಪಾಂಡುರಂಗ ಗುಣಾ ನಾಯ್ಕ ರವರಿಗೆ ಮಂಜೂರಾಗಿದೆ ಎಂದು ಟಿ.ಎನ್.ಸಿ ನಂ. 4184+5456 ದಿಃ 20–07–1982 ಎಂದು ನಮುದಾಗಿರುತ್ತದೆ ಎಂದರೆ ಸಾಕ್ಷಿಯು ಜಂಟಿ ಖಾತೆಯಲ್ಲಿರುತ್ತದೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ನಿ.ಆರ್–32 ಎಂದು ಗುರುತಿಸಲಾಯಿತು.

13. ಸರ್ವೆ ನಂ.264 ಅ/1 ರ ಜಮೀನಿನ ಪರಿಹಾರದ ಮೊತ್ತದಲ್ಲಿ ¼ ಭಾಗ ಮಾಡಲು ತಕರಾರು ಇರುವುದಿಲ್ಲ. ಅದೇ ರೀತಿ ಸರ್ವೆ ನಂ.116, 253, 254, 246 ಸಿ, 256 ಸಿ ರ ಜಮೀನುಗಳಿಗೆ ಮಾತ್ರ ಪರಿಹಾರದ ಮೊತ್ತದಲ್ಲಿ ¼ ಭಾಗ ಪಡೆಯಲು ಹಕ್ಕುಳ್ಳವನಾಗಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ಸರ್ವೆ ನಂ. 269 ಅ/6, 269 ಅ/10, 533/1 ಅ ರ ಜಮೀನುಗಳಿಗೆ ಭೂ ನ್ಯಾಯ ಮಂಡಳಿಯ ಆದೇಶದಂತೆ ಪಾಂಡುರಂಗ ಗುಣಾ ನಾಯ್ಕ ರವರು ಮಾತ್ರ ಹಕ್ಕುಳ್ಳವನಾಗಿರುತ್ತಾರೆ ಎಂದರೆ ಸರಿಯಲ್ಲ. ಆ ಸರ್ವೆ ನಂಬರ್ ಗಳಲ್ಲಿರುವ ಮನೆಯು ಸಹ ಪಾಂಡುರಂಗ ಗುಣಾ ನಾಯ್ಕ ರವರಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ಬುಧಿಯಾ ಗುಣಾ ನಾಯ್ಕ ರವರು ಮಿಲಿಟರಿಯಲ್ಲಿ ಕೆಲಸ ಮಾಡುತ್ತಿದ್ದ ಕಾರಣ, ಮೇಲೆ ಹೇಳಿದ ಮೂರು ಸರ್ವೆ ನಂಬರ್ ಗಳಲ್ಲಿ ಅವರಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಬುಧಿಯಾ ಗುಣಾ ನಾಯ್ಕ ರವರಿಗೆ ಸಹಾಯವಾಗಲು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 12 ನೇ ಎದುರುದಾರರ ಪರವಾಗಿ ಶ್ರೀ ಎಂ.ಎಂ.ಎಂ. ವಕೀಲರಿಂದಃ–**

14. 12 ನೇ ಎದುರುದಾರರಾದ ಶ್ರೀಮತಿ ಸುಗಂಧಾ ರವರು ನನ್ನ ಮೃತ ಅಣ್ಣನಾದ ಸುರೇಶ ರವರ ಹೆಂಡತಿ ಎಂದರೆ ಸರಿ. ಆದಕಾರಣ, ಅವರಿಗೂ ಸಹ ಆಸ್ತಿಗಳಲ್ಲಿ ಹಕ್ಕು ಇರುತ್ತದೆ ಎಂದರೆ ಸರಿ. ಅದೇ ರೀತಿ, ಈ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಪರಿಹಾರ ಹಣ ಬಂದಲ್ಲಿ, ಅದರಲ್ಲಿಯೂ ಸಹ ಅವರಿಗೆ ಹಕ್ಕು ಇರುತ್ತದೆ ಎಂದರೆ ಸರಿ. ಈ ಹಿಂದೆ ಸೀ–ಬರ್ಡ್ ಗೆ ಸ್ವಾಧೀನಗೊಂಡ ಜಮೀನಿಗೆ ಸಂಬಂಧಿಸಿದ ಪರಿಹಾರದ ಹಣವನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-
(ಮಾಯಣ್ಣ ಬಿ. ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ